a disaster" What is that ? just see, ನೀವು ಹೇಳಿದಂತೆ ನಟವರ್‌ಸಿಂಗ್ ಬಗ್ಗೆ ಕೇಳಿದರೆ ಅದಕ್ಕೊಬ್ಬರು ಅಲ್ಲಿ reply ಕೊಡಬೇಕು ಇಲ್ಲಿ ನನಗೊಬ್ಬರು ರಿಪ್ಲೈ ಕೊಡಬೇಕು See, wit, repartee, give and take,that should become a part of the Legislative proceedings If it loses the borderline of decency,

**ಶ್ರೀ ಎಂ ಪಿ ಪ್ರಕಾಶ್** – I agree with that ಈಗ ತಾವು ಹೇಳಿದ್ದನ್ನು ಇದು ಬಹಳ ಚಟುವಟಿಕೆಯಿಂದ ಕ್ರಿಯಾತ್ಮಕವಾಗಿ ನಡೆಯಬೇಕಾದಾಗ ಇವೆಲ್ಲಾ ಅಗತ್ಯವಿರುತ್ತದೆ ಇಲ್ಲವೆಂದಲ್ಲ ಆದರೆ, ಸಮಯ ಸಂದರ್ಭಗಳು ಕೂಡ ಬಹಳ ಮುಖ್ಯ ಕಾವೇರಿ ವಿವಾದದಲ್ಲಿ ಇದ್ಯಾವುದನ್ನೋ ತಂದು ಇಡುವುದು, ವಸಂತ ಬಂಗೇರ ಅವರದ್ದು ಒಂದು ಅವರು ಮೂರುವರೆ ಕೋಟಿ ಕೊಟ್ಟರು ಎಂದು ಯಾವುದೋ ಹೇಳಿದ್ದನ್ನು ತರುವುದು ಅದು ಸದಭಿರುಚಿಯಲ್ಲ ಆ ಸಂದರ್ಭಕ್ಕೆ ಅದನ್ನು ಸರಿಯಾಗಿ ಉಪಯೋಗಿಸಿದಾಗ ಸರಿಯಾಗುತ್ತದೆ

**ಶ್ರೀ ಎನ್ ಧರ್ಮಸಿಂಗ್** – ಆ ಸಂದರ್ಭದಲ್ಲಿ ತಾವು ಇರಲಿಲ್ಲ ತಾವು ಇದ್ದರೆ ಇದು ಆಗುತ್ತಿರಲಿಲ್ಲ

**ಶ್ರೀ ಎಂ ಪಿ ಪ್ರಕಾಶ್** – ಶೂನ್ಯವೇಳೆಯಲ್ಲಿ ಅದನ್ನು ತರಲಿಕ್ಕೆ ಬರುವುದಿಲ್ಲ ಏಕೆಂದರೆ ನಿಮ್ಮ ಹತ್ತಿರ ಎಷ್ಟು canon power ಇದೆಯೋ ನಮ್ಮ ಹತ್ತಿರನೂ ಇದೆ ಏಕೆಂದರೆ, ಈ ಐವತ್ತು ವರ್ಷದಲ್ಲಿ ತಪ್ಪುಗಳನ್ನು ಮಾಡಿಕೊಂಡು ಬಂದಿರುವುದರಿಂದ, ನಾವೆಲ್ಲರೂ ತಪ್ಪಿತಸ್ಥರು ಒಬ್ಬರು ಈಗ ತಪ್ಪು ಮಾಡಿರಬಹುದು ಇನ್ನೊಬ್ಬರು ನಂತರ ಮಾಡಿರಬಹುದು ಆದುದರಿಂದ, ಇದು disaster

**(ಆ) ವಿಷಯ :– ಮಂಡ್ಯ ಜಿಲ್ಲೆಯ ಡಿ ಸಿ ಕಛೇರಿ ಮುಂದೆ ನಡೆದಿರುವ ಘಟನೆ ಬಗ್ಗೆ**

**ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ)** – ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ಮಾಡುತ್ತಿದ್ದಂಥ ಮಹಿಳೆಯರು ಮತ್ತು ಕೃಷಿ ಕಾರ್ಮಿಕರ ಮೇಲೆ ಪೊಲೀಸ್‌ನವರು ಲಾರಿ ಚಾರ್ಜ್

ಮಾಡಿರತಕ್ಕಂಥ ವಿಚಾರವನ್ನು ನಿನ್ನೆ ದಿವಸ ಎಲ್ಲಾ ಟಿ ವಿ ಗಳಲ್ಲಿ ಸುಮಾರು ಮೂರ್ನಾಲ್ಕು ನಿಮಿಷ ಅಲ್ಲಲ್ಲಿ ಏನೇನು ನಡೆದಿದೆ ಎಂಬುದನ್ನು ತೋರಿಸಿದ್ದಾರೆ ಅವರ ಬೇಡಿಕೆ ಏನಿತ್ತೆಂದರೆ, ರಾಜ್ಯ ಸರ್ಕಾರ ರೇಷನ್ ಕಾರ್ಡ್ ಮುಖಾಂತರ ಆಹಾರವನ್ನು ಹಂಚಿಕೆ ಮಾಡತಕ್ಕಂಥದರ ಗ್ರೇಡಿಂಗ್ ಸಿಸ್ಟಮ್ ಮಾಡಿರತಕ್ಕಂಥದು ಸರಿಯಲ್ಲ, ಅಂದರೆ ನಾಲ್ಕು, ಐದು ಕೆ ಜಿ ಎಂದು ನಿಗದಿ ಮಾಡಿರತಕ್ಕಂಥದು ಸರಿಯಲ್ಲ ಹಿಂದೆ ಏನು ತೀರ್ಮಾನವಾಗಿತ್ತೋ ಅದನ್ನೆ ಜಾರಿ ಮಾಡಬೇಕೆಂದು, ಜಿಲ್ಲಾಧಿಕಾರಿಯವರ ಕಛೇರಿ ಮುಂದೆ ಧರಣಿ ಮಾಡುತ್ತಿದ್ದಂಥ ಸಂದರ್ಭದಲ್ಲಿ ಪೊಲೀಸ್‌ನವರು ವಿನಾಕಾರಣ ಅವರ ಮೇಲೆ ಲಾರಿ ಚಾರ್ಜ್ ಮಾಡಿ ಅಲ್ಲಿದ್ದಂಥ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಎಸಗಿದ್ದಾರೆ ಇದನ್ನು ಎಲ್ಲರೂ ಟಿ ವಿ ಯಲ್ಲಿ ನೋಡಿರುತ್ತಾರೆ ಮಾನ್ಯ ಚೆಲುವರಾಯಸ್ವಾಮಿಯವರು ಅದನ್ನು ನೋಡಿ ನನಗೆ ಬೆಳಿಗ್ಗೆ ಫೋನ್ ಮಾಡಿ ಈ ರೀತಿಯಾದ ಘಟನೆ ಅಲ್ಲಿ ಆಗಿದೆ, ಆದ್ದರಿಂದ ಏನಾದರೂ ಮಾಡಬೇಕೆಂದು ಹೇಳಿದರು ಅವರು ನನಗೆ ಫೋನ್ ಮಾಡಿದ್ದರಿಂದ ನಾನು ಅವರನ್ನು ನಿಜವಾಗಿಯೂ ಅಭಿನಂದಿಸುತ್ತೇನೆ ನಿನ್ನೆ ದಿವಸ ಈ ಘಟನೆಯಲ್ಲಿ ತೊಂದರೆಯಾದಂಥ ಐದಾರು ಜನರು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ ಮತ್ತೆ ಹೆಣ್ಣು ಮಕ್ಕಳಿಗೆ ಮತ್ತು ಕೃಷಿ ಕಾರ್ಮಿಕರಿಗೆ ತುಂಬಾ ಗಂಭೀರವಾದಂಥ ಗಾಯಗಳಾಗಿವೆ ಪೊಲೀಸ್‌ನವರು ಲಾರಿ ಚಾರ್ಜ್ ಮಾಡಿ ಹೆಣ್ಣು ಮಕ್ಕಳನ್ನು ದಾರಿಯಲ್ಲಿ ಎಳೆದುಕೊಂಡು ಹೋಗಿ ಹೊಡೆಯತಕ್ಕಂಥ ಅವಶ್ಯಕತೆ ಅಲ್ಲಿ ಏನೂ ಇರಲಿಲ್ಲ ಅಲ್ಲಿನ ಪರಿಸ್ಥಿತಿ ವಿಕೋಪಕ್ಕೆ ಹೋದಂಥ ಸಂದರ್ಭದಲ್ಲಿ ಅದನ್ನು ನಿಭಾಯಿಸುವುದಕ್ಕೆ ಸಾಧ್ಯವಿತ್ತು ನಿಭಾಯಿಸುವುದನ್ನು ಬಿಟ್ಟು ಹೆಣ್ಣು ಮಕ್ಕಳ ಮೇಲೆ ಆ ರೀತಿಯಾಗಿ ದಬ್ಬಾಳಿಕೆ ಮಾಡಿರತಕ್ಕಂಥದು, ಹೊಡೆದಿರತಕ್ಕಂಥ ಕೆಲಸ ಅಲ್ಲಿ ಆಗಿದೆ ಇಬ್ಬರ ಕಾಲಿಗೆ ಗಂಭೀರವಾದ ಏಟು ಆಗಿದ್ದು ಅವರು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ ಒಟ್ಟು ಏಳೆಂಟು ಜನ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ ಇದರ ಬಗ್ಗೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಂಡು, ಆ ದೌರ್ಜನ್ಯ ಮಾಡಿರತಕ್ಕಂಥ ಪೊಲೀಸ್‌ನವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತೆ ತಕ್ಷಣ ಅವರ ಬೇಡಿಕೆಯನ್ನು ಈಡೇರಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಮತ್ತೆ ಈ ಬೇಡಿಕೆಗೆ ಕೇವಲ ಮಂಡ್ಯ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ, ಈ ಬೇಡಿಕೆ ಇಡೀ ರಾಜ್ಯ ವ್ಯಾಪ್ತಿ ಇರತಕ್ಕಂಥದ್ದಾಗಿದೆ

ಬಹುಶಃ ಬೇರೆ ಬೇರೆ ಕಡೆ ಈ ರೀತಿಯಾದ ಘಟನೆಗಳು ಪ್ರಾರಂಭವಾಗಬಹುದು ಆದ್ದರಿಂದ ಮೊದಲೇ ಎಚ್ಚರಿಕೆ ತೆಗೆದುಕೊಂಡು ಸರ್ಕಾರ ಆ ಸಮಸ್ಯೆಯನ್ನು ಪರಿಹಾರ ಮಾಡಬೇಕು ಮತ್ತೆ ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಯವರ ಕಛೇರಿ ಮುಂದೆ ಆಗಿರುವ ದೌರ್ಜನ್ಯದ ಬಗ್ಗೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ

**ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆಯ ಸಚಿವರು)** – ಮಾನ್ಯ ಅಧ್ಯಕ್ಷರೇ, ನಿನ್ನೆದಿವಸ ಅಲ್ಲಿ ನಡೆದಿರತಕ್ಕಂಥ ಘಟನೆ ಯಾರಿಗೂ ಸಂತೋಷ ಕೊಡತಕ್ಕಂಥದ್ದೇನು ಅಲ್ಲ ಅವೈಜ್ಞಾನಿಕ ಯೂನಿಟ್ ರೇಷನ್ ಪದ್ಧತಿ ಎಂಬ ಪದವನ್ನು ಇದರಲ್ಲಿ ಬಳಸಿದ್ದಾರೆ ತಮಗೂ ಕೂಡ ಗೊತ್ತಿರುವ ಹಾಗೆ ಯುನಿಟ್ ರೇಷನ್ ಪದ್ಧತಿಯ ಪ್ರಕಾರ ಪಡಿತರ ಚೀಟಿಯಲ್ಲಿ ಕೆಲವು ಕಡೆ ತಾಲ್ಲೂಕು ಮತ್ತು ಕೆಲವು ಕಡೆ ಜಿಲ್ಲೆಗಳಲ್ಲಿ 100 ಕ್ಕೆ 70 ರಿಂದ ಹಿಡಿದು 102% ನವರೆಗೂ ಕೂಡ ಪಡಿತರ ಚೀಟಿ ಬೇಕೆಂದು ಗೊಂದಲವನ್ನು ಸೃಷ್ಟಿ ಮಾಡಿದ್ದಾರೆ ಹಾಗಾದರೆ, ನಾವು ಇಲ್ಲಿಯವರೆಗೆ ಮಾಡಿರತಕ್ಕಂಥ ಬಡತನ ನಿವಾರಣೆ ಕ್ರಮಗಳೇನಿವೆ ಅವುಗಳ್ಯಾವವು ಕೂಡ ಉಪಯುಕ್ತವಾದಂಥ ಫಲಿತಾಂಶವನ್ನು ಕೊಟ್ಟಿಲ್ಲವೆಂದು ಅರ್ಥವಾಗುತ್ತದೆ ಆ ಕಾರಣಕ್ಕಾಗಿ ಎಲ್ಲರಿಗೂ ಕೂಡ ಈ ರೇಷನ್ ಕಾರ್ಡ್ ಬೇಕೆಂಬುದಕ್ಕಾಗಿ ಸತ್ಯಾಗ್ರಹ ಮಾಡುತ್ತಿದ್ದಾರೆ ಆದರೆ, ಸತ್ಯಾಗ್ರಹ, ಧರಣಿ ಮಾಡ ತಕ್ಕಂಥದ್ದಾಗಲಿ ಅವುಗಳು ನಿಯಮಾವಳಿಗೆ ಅನುಗುಣ ವಾಗಿರತಕ್ಕಂಥದಾಗಿರಬೇಕು ಯಾವುದಾದರೂ ಸತ್ಯಾಗ್ರಹ ಮಾಡುತ್ತೇವೆ ಮತ್ತು ಮುತ್ತಿಗೆ ಹಾಕುತ್ತೇವೆ ಮತ್ತೆ ಧರಣಿ ಮಾಡುತ್ತೇವೆಂದರೆ ಪೊಲೀಸ್‌ನವರಿಗೆ ಮೊದಲು ತಿಳಿಸಬೇಕು ಅಲ್ಲಿರತಕ್ಕಂಥ ಜಿಲ್ಲಾ ಕಛೇರಿಗೆ ನಾಲ್ಕು ಬಾಗಿಲುಗಳಿವೆ ಅಲ್ಲಿನ ನಾಲ್ಕು ಬಾಗಿಲುಗಳಿಗೆ ಸುತ್ತುವರಿದು, ಅಲ್ಲಿ ಒಳಗಡೆ ಇದ್ದಂಥವರನ್ನು ಹೊರಕ್ಕೆ ಬಿಡದೇ ಮತ್ತು ಹೊರಕ್ಕೆ ಇದ್ದಂಥವರು ಒಳಗಡೆ ಹೋಗಲಾರದಂತೆ ಕಾನೂನು ಬಾಹಿರವಾಗಿ ಸುಮಾರು ನಾಲ್ಕು ತಾಸಿನವರೆಗೆ ಈ ರೀತಿಯಾಗಿ ನಡೆಸಿದ್ದಾರೆ ಈ ಸಂದರ್ಭದಲ್ಲಿ ಅನೇಕ ಮನವರಿಕೆಯ ಕಾರ್ಯಕ್ರಮಗಳನ್ನು ಮಾಡಿದ್ದರೂ ಕೂಡ ಪ್ರತಿಭಟನಾಕಾರರು ಯಾವುದೇ ಒಂದು ಮನವರಿಕೆಗೆ ಒಳಗಾಗದೇ ಅಲ್ಲಿ ಅಶಾಂತಿಯ ಘಟನೆಯನ್ನು ಉಂಟು ಮಾಡತಕ್ಕಂಥ

ಸಂದರ್ಭದಲ್ಲಿ ಲಾರಿ ಚಾರ್ಜ್‌ನ್ನು ಮಾಡಲಾಗಿದೆ ಲಾರಿ ಚಾರ್ಜ್ ಅಂದರೆ, ಅವರನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದಕ್ಕೆ ಮಾಡಿದಾಗ ಮುಂದೆ ಇದ್ದಂಥ ಕೆಲವರಿಗೆ ಹೊಡೆತ ಬಿದ್ದಿವೆ ಅದರಲ್ಲಿ ಮಹಿಳೆಯರಿಗೆ ಹೊಡೆಯಲಾಗಿದೆ ಎನ್ನತಕ್ಕಂಥದನ್ನು ನಾವು ಒಪ್ಪುವುದಿಲ್ಲ ಆದರೆ, ಅನಿವಾರ್ಯವಾದಂಥ ಕೆಲವು ಸ್ಥಿತಿ ಬಂದಾಗ ಕೆಲವು ಕ್ರಮಗಳನ್ನು ಕೈಗೊಳ್ಳಲಾಗಿದೆ ಇದರ ನಾಯಕತ್ವ ಯಾರು ವಹಿಸಿಕೊಂಡಿರತಕ್ಕಂಥವರು? ಅವರನ್ನು ನಿಯಂತ್ರಿಸುವಂಥ ರೀತಿಯ ನಾಯಕತ್ವವನ್ನು ಅವರು ಉಳಿಸಿಕೊಂಡಿದ್ದರೆ? ಈ ಎಲ್ಲಾ ವಿಷಯಗಳು ಪ್ರಶ್ನೆಯಾಗಬೇಕಾಗಿದೆ ಈ ಸಂದರ್ಭದಲ್ಲಿ ತತ್‌ಕ್ಷಣ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಉಸ್ತುವಾರಿ ಸಚಿವರು ಹೇಳಿದ್ದಾರೆ ಇದರ ಬಗ್ಗೆ ತನಿಖೆ ನಡೆಸಿ ವಿವರವಾದಂಥ ಉತ್ತರ ಕೊಡಿ ಎಂದು ಐಜಿಪಿ ಯವರಿಗೆ ಹೇಳಿದ್ದೇನೆ ಆಗಿರತಕ್ಕಂಥ ದುರ್ಘಟನೆಗೆ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ ಮತ್ತೆ ಚಳುವಳಿಗಾರರೂ ಕೂಡ ಮುಂದೆ ಈ ತರಹದಲ್ಲಿ ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳತಕ್ಕಂಥ ಪ್ರವೃತ್ತಿ ಮಾಡಬಾರದೆಂದು ಹೇಳಿ ನಿಮ್ಮ ಮೂಲಕ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** – ನೀವು ಹೇಳಿದ್ದೆಲ್ಲಾ ನಿಜ ಆದರೆ, ಮಾನ್ಯ ಪ್ರಕಾಶ್‌ರವರೆ, ಒಂದು ವಿಚಾರ ಮಾತ್ರ ಸರಿಯಿಲ್ಲ ಅವರು ಮುತ್ತಿಗೆ ಹಾಕಿದ್ದು ನಿಜ ಆದರೆ ಒಳಗಡೆ ಇರುವವರನ್ನು ಹೊರಗಡೆ ಮತ್ತು ಹೊರಗಡೆ ಇರತಕ್ಕಂಥವರನ್ನು ಒಳಗಡೆ ಬಿಡದೇ ಬೀಗ ಹಾಕಿದ್ದರು ಎನ್ನತಕ್ಕಂಥದು ಸರಿಯಲ್ಲ ಇದರ ಬಗ್ಗೆ ಸಂಧಾನವಾಗಿ ಹೊರಗಡೆ ಬರತಕ್ಕಂಥ ಸಂದರ್ಭದಲ್ಲಿ ಪೊಲೀಸ್‌ನವರು ಲಾರಿ ಚಾರ್ಜ್ ಮಾಡಿದ್ದಾರೆ

**ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)** .– ಮಾನ್ಯ ಅಧ್ಯಕ್ಷರೆ, ಜಿಲ್ಲಾಧಿಕಾರಿಯವರು ಮತ್ತು ಪೊಲೀಸ್ ಅಧಿಕಾರಿಗಳು ಹಾಗೂ ಗ್ರಾಹಕರ ಜೊತೆ ನಾನು ದೂರವಾಣಿ ಮೂಲಕ ಮಾತನಾಡಿದ್ದೇನೆ ಆ ನಂತರ ಮಾನ್ಯ ಶಾಸಕರು ಅಲ್ಲಿಗೆ ಹೋಗುತ್ತಾರೆಂದು ಗೊತ್ತಾದಾಗ ನಾನು ಅವರ ಜೊತೆ ದೂರವಾಣಿ ಮೂಲಕ ಮಾತನಾಡಿದೆ ಮಾನ್ಯ ಪ್ರಕಾಶ್‌ರವರು ಹೇಳಿದ ಹಾಗೆ ಬಹುಶಃ ಬೆಳಿಗ್ಗೆ 12 00 ಗಂಟೆಯಿಂದ ಘಟನೆ ನಡೆದಿದೆ ಮತ್ತೆ ಈ ಜಿಲ್ಲಾಡಳಿತ ಕಛೇರಿಯಲ್ಲಿ ಕೋರ್ಟ್

ಹಾಲ್ ಕೂಡ ಇದೆ ಡಿ ಸಿ ಯವರು ಹೊರಗಡೆಯಿಂದ ಒಳಗಡೆ ಪ್ರವೇಶ ಮಾಡಿದ ನಂತರ ಜಸ್ಟಿಸ್ ಮತ್ತು ಲಾಯರ್‌ಗಳು ಹಾಗೂ ಪಬ್ಲಿಕ್ ಹೊರಗಡೆ ಬರುವಂಥ ಸಂದರ್ಭದಲ್ಲಿ ಈ ಘಟನೆ ನಡೆದಿದೆ ಊಟದ ಸಮಯ ಮುಗಿದು ಮೂರ್ನಾಲ್ಕು ಗಂಟೆಯವರೆಗೆ ಊಟ ಮಾಡುವುದಕ್ಕೆ ಹೊರಗಡೆ ಬರುವುದಕ್ಕೆ ಅವಕಾಶ ಇಲ್ಲದೇ ಇದ್ದಾಗ ಮತ್ತು ಆ ನಂತರ ಬರುವಾಗ ನಡೆದಿದೆ ಮಾಸ್ ಲಾರಿ ಚಾರ್ಜ್ ಮಾಡುವುದಕ್ಕೆ ಯಾರೂ ಸಹ ತೀರ್ಮಾನ ತೆಗೆದುಕೊಂಡಿಲ್ಲ ಅಲ್ಲಿ ಘರ್ಷಣೆ ನಡೆಯುವುದಕ್ಕೆ ಹೋದಾಗ ಸ್ವಲ್ಪ ಜನಕ್ಕೆ ಈ ರೀತಿಯಾಗಿದೆ ಇದಕ್ಕೆ ಈಗಾಗಲೇ ವಿಷಾದವನ್ನು ವ್ಯಕ್ತಪಡಿಸಿದ್ದಾರೆ ಇದರ ಬಗ್ಗೆ ಐಜಿಪಿಯಿಂದ ವರದಿತೆಗೆದುಕೊಂಡು ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥ ವಿಚಾರವಾಗಿದೆ ಯೂನಿಟ್ ರೇಷನ್ ಮಾಡಿರತಕ್ಕಂಥವರು ಕೇವಲ ಮಂಡ್ಯ ಜಿಲ್ಲೆಗೆ ಸೀಮಿತವಲ್ಲ ತಮ್ಮ ಮೂಲಕ ಮಾನ್ಯ ಶ್ರೀರಾಮರೆಡ್ಡಿಯವರಲ್ಲಿ ಮತ್ತು ಅಲ್ಲಿ ಧರಣಿ ಮಾಡತಕ್ಕಂಥವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅಲ್ಲಿ ಧರಣಿಯನ್ನು ಇವತ್ತೂ ಕೂಡ ಮುಂದುವರೆಸುತ್ತಿರುವುದರಿಂದ ಮತ್ತು ಇದರ ಬಗ್ಗೆ ಜಿಲ್ಲಾಧಿಕಾರಿಗಳು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಆಹಾರ ಇಲಾಖೆಯ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಕುಳಿತು ಇದರ ಬಗ್ಗೆ ಗಂಭೀರವಾದಂಥ ಚರ್ಚೆ ಮಾಡುತ್ತಿದ್ದಾರೆ ಆದಷ್ಟು ಬೇಗ ಒಂದು ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಅಲ್ಲಿಯವರೆಗೆ ದಯಮಾಡಿ ಧರಣಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು, ಹಾಗೂ ತಮ್ಮ ಮೂಲಕ ಮಾನ್ಯ ಶ್ರೀರಾಮರೆಡ್ಡಿಯವರೂ ಸಹ ಅವರ ಸ್ನೇಹಿತರಿಗೆ ವಿನಂತಿ ಮಾಡಲೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ

**ಅಧ್ಯಕ್ಷರು** .– ಮಾನ್ಯ ಧರ್ಮಸಿಂಗ್‌ರವರೆ, ತಾವು ಮಾತನಾಡಿ

**ಶ್ರೀ ಎನ್ ಧರ್ಮಸಿಂಗ್** – ನಾನು ಹೇಳುವುದೇನೆಂದರೆ, ಪ್ರಶ್ನೋತ್ತರ ಮೊದಲು ನಡೆಸಿ ಅನಂತರ ಶೂನ್ಯ ವೇಳೆಗೆ ಅವಕಾಶ ಕೊಡಿ

**ಅಧ್ಯಕ್ಷರು** – ಮಾನ್ಯ ಧರ್ಮಸಿಂಗ್ ಸಾಹೇಬರೆ, ಈ ತರಹ ಆದರೆ ಸದನ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ ಬಿಎಸಿ ಸಭೆಯಲ್ಲಿ ಪ್ರಶ್ನೋತ್ತರವನ್ನು ಕೊನೆಯಲ್ಲಿಡಿ ಎಂದು ಹೇಳಿದ್ದಕ್ಕೆ ನಾನು ಕೊನೆಯಲ್ಲಿಟ್ಟಿದ್ದೇನೆ ಬಜೆಟ್ ಚರ್ಚೆಯಲ್ಲಿ

ಭಾಗವಹಿಸುವುದಕ್ಕೆ ಇಷ್ಟವಿದೆ ಆದ್ದರಿಂದ ಈ ರೀತಿಯಾಗಲಿ ಎಂದು ತಾವು ಹೇಳಿದ್ದೀರಿ ನಾನು ಆ ಪ್ರಕಾರವೇ ಹಾಕಿದ್ದೇನೆ ಆದರೆ, ಕಾವೇರಿ ವಿಚಾರ ಪ್ರಸ್ತಾಪ ಮಾಡಬೇಕೆಂದು ಹೇಳಿದ್ದಕ್ಕೆ ನಾನು ಮೊದಲು ಅವಕಾಶ ಕೊಟ್ಟಿದ್ದೇನೆ ದಯಮಾಡಿ ಬಜೆಟ್‌ಮೇಲಿನ ಭಾಷಣವನ್ನು ಆರಂಭ ಮಾಡಿ ಈ ರೀತಿಯಾದರೆ ಸಭೆ ನಡೆಸುವುದಕ್ಕೆ ಆಗುವುದಿಲ್ಲ ಎಲ್ಲದಕ್ಕೂ ಒಂದು ಇತಿಮಿತಿ ಇರುತ್ತದೆ

**ಶ್ರೀ ಎನ್ ಧರ್ಮಸಿಂಗ್** .– ಮಾನ್ಯ ಶಿವರಾಂರವರು ಈ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಇದ್ದರು

**ಶ್ರೀ ಬಿ ಶಿವರಾಂ** – ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನಿನ್ನೆ ದಿವಸ ತಮಗೆ ಪತ್ರ ಬರೆದು ಕಳುಹಿಸಿಕೊಟ್ಟಿದ್ದೇನೆ

**ಅಧ್ಯಕ್ಷರು** – ಆಯಿತು ನಾನು ಈಗಾಗಲೇ ವಿನಂತಿ ಮಾಡಿಕೊಂಡು ಅತೀ ಮುಖ್ಯವಾದುದಾದರೆ, ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಮಧ್ಯಾಹ್ನದ ಮೇಲೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ ಈಗ ಬಜೆಟ್ ಮೇಲೆ ಚರ್ಚೆ ಆರಂಭವಾಗಲೆಂದು ನಾನು ಪರಿಪರಿಯಾಗಿ ಹೇಳಿದ್ದೇನೆ ಆದರೆ, ನಮ್ಮಲ್ಲಿ ಏನಾಗಿದೆ ಎಂದರೆ, ನಾನು ಹೇಳಿದರೆ ಏನೇನೋ ಹೇಳುತ್ತಾರೆಂದು ಹೇಳುತ್ತಾರೆ ಯಾವುದನ್ನೂ ನಿಯಮಾವಳಿ ಪ್ರಕಾರ ನಡೆಯುವುದಕ್ಕೆ ಬಿಡುತ್ತಿಲ್ಲ ಈ ತರಹವಾದರೆ, ತಾವು ಇಷ್ಟ ಬಂದ ರೀತಿಯಲ್ಲಿ ಮಾತನಾಡಿ, ಇಷ್ಟ ಬಂದ ರೀತಿಯಲ್ಲಿ ಮಾಡಿಕೊಳ್ಳಿ ವಿರೋಧಪಕ್ಷದ ನಾಯಕರಾಗಿ ನೀವು ನಮಗೆ ಮಾರ್ಗದರ್ಶನ ಮಾಡಬೇಕು ಅದನ್ನು ಬಿಟ್ಟು ಅವರು ಮಾತನಾಡಲೆಂದು ಹೇಳುತ್ತೀರಿ, ಮತ್ತೆ ಕಾವೇರಿ ಚರ್ಚೆಯಲ್ಲಿ ತಾವು ಕೂಡ ಭಾಗವಹಿಸಿದ್ದೀರಿ ಈ ರೀತಿಯಾದರೆ ಹೇಗೆ ಸ್ವಾಮಿ? ತಾವು ಹಿರಿಯರು, 8 ಸಾರಿ ಇಲ್ಲಿಗೆ ಗೆದ್ದು ಬಂದಿದ್ದೀರಿ ಮತ್ತೆ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ, ತಾವೇ ಈ ರೀತಿ ಮಾಡಿದರೆ ಹೇಗೆ?

**ಶ್ರೀ ಎನ್ ಧರ್ಮಸಿಂಗ್** .– ಮಾನ್ಯ ಶಂಕರಮೂರ್ತಿಯವರು ಉನ್ನತ ಶಿಕ್ಷಣ ಸಚಿವರು ಮತ್ತು ವಿಧಾನ ಪರಿಷತ್ತಿನಲ್ಲಿ ಸಭಾನಾಯಕರಾಗಿ ಕೆಲಸ ಮಾಡುತ್ತಿದ್ದಾರೆ ಇವತ್ತು ಅವರು ಹಾಸನ ಜಿಲ್ಲೆಗೆ ಹೋದ ಮೇಲೆ, ಯಾವತ್ತೂ ಕೂಡ ಸರ್ಕಾರ ನಡೆಸತಕ್ಕಂಥವರು

**ಅಧ್ಯಕ್ಷರು** – ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಮಧ್ಯಾಹ್ನದ ಮೇಲೆ ಈ ವಿಚಾರಗಳನ್ನು ತೆಗೆದುಕೊಳ್ಳೋಣ

**ಶ್ರೀ ಎನ್ ಧರ್ಮಸಿಂಗ್** – ಆಗುವುದಿಲ್ಲ ಈಗ ಮುಗಿಸುತ್ತೇನೆ

**ಅಧ್ಯಕ್ಷರು** – ಈಗ ಆಗುವುದಿಲ್ಲ ತಾವು ಆದ ಮೇಲೆ ಮತ್ತೊಬ್ಬರು ಮಾತನಾಡುವುದಕ್ಕೆ ನಿಂತುಕೊಳ್ಳುತ್ತಾರೆ

**ಶ್ರೀ ಎನ್ ಧರ್ಮಸಿಂಗ್** – ಇದು ಬಹಳ ಪ್ರಮುಖವಾದಂಥ ವಿಷಯ

**ಅಧ್ಯಕ್ಷರು** – ತಾವು ಬಜೆಟ್ ಮೇಲೆ ಚರ್ಚೆ ಪ್ರಾರಂಭ ಮಾಡಿ

**ಶ್ರೀ ಎನ್ ಧರ್ಮಸಿಂಗ್** – ಮಾನ್ಯ ಶಂಕರಮೂರ್ತಿಯವರು ಇವತ್ತಿನ ದಿವಸ ಬಹಳ ಬೇಜವಾಬ್ದಾರಿತನದ ಹೇಳಿಕೆಯನ್ನು ಕೊಟ್ಟಿದ್ದಾರೆ

**ಅಧ್ಯಕ್ಷರು** – ತಾವು ವಿರೋಧಪಕ್ಷದ ನಾಯಕರಾಗಿ ಏಕೆ ಈ ರೀತಿಯಾದ ಕೆಟ್ಟ ಸಂಪ್ರದಾಯ ಹಾಕುತ್ತಿದ್ದೀರೆಂದು ನನಗೆ ಅರ್ಥವಾಗುತ್ತಿಲ್ಲ

**ಶ್ರೀ ಎನ್ ಧರ್ಮಸಿಂಗ್** – ನೀವು ನನಗೆ ಅವಕಾಶ ಕೊಟ್ಟಿದ್ದಕ್ಕೆ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ

**ಅಧ್ಯಕ್ಷರು** – ನಾನು ಎಲ್ಲಿ ಅವಕಾಶ ಕೊಟ್ಟಿದ್ದೇನೆ?

**ಶ್ರೀ ಎನ್ ಧರ್ಮಸಿಂಗ್( ವಿರೋಧ ಪಕ್ಷದ ನಾಯಕರು)** – ಮಾನ್ಯ ಅಧ್ಯಕ್ಷರೆ, ಮಾನ್ಯ ಶಂಕರಮೂರ್ತಿಯವರು ಏನು ಹೇಳಿದ್ದಾರೆ, ಶ್ರೀಮತಿ ಸೋನಿಯಾಗಾಂಧಿಯವರು ರಾಷ್ಟ್ರೀಯ ನಾಯಕರು, ಯುಪಿಎ ಛೇರ್ಮನ್‌ರಾಗಿದ್ದಾರೆ ಇವತ್ತು ಎಲ್ಲಾ ಪಕ್ಷಗಳ ಸಮನ್ವಯ ಸಮಿತಿಯ ಅಧ್ಯಕ್ಷಿಣಿಯಾಗಿದ್ದಾರೆ ಮಾನ್ಯ ರಾಜಶೇಖರ್‌ರೆಡ್ಡಿಯವರು ಆಂಧ್ರಪ್ರದೇಶದ ಮುಖ್ಯ ಮಂತ್ರಿಗಳಾಗಿದ್ದಾರೆ ಅವರ ಹೇಳಿಕೆಯನ್ನು ನೋಡಿ ನಾವು ಇವತ್ತು ಓದುವುದಕ್ಕೆ ಇಚ್ಛೆಪಡುತ್ತಿಲ್ಲ ಇವತ್ತು ಸಮ್ಮಿಶ್ರ ಸರ್ಕಾರ ನಡೆಸತಕ್ಕಂಥ ತಾವು ಜಾತಿಯತೆಯಾಗಿ ಇವತ್ತು irresponsible ಆಗಿ ಹೇಳಿಕೆಯನ್ನು ಕೊಡುವಂತಾದರೆ, ನಾವು ರಾಜ್ಯದಲ್ಲಿ

ಹೇಗೆ ಮಾಡುವುದು? ಇವತ್ತು ಕಾಂಗ್ರೆಸ್ ಪಕ್ಷ ಇಡೀ ರಾಷ್ಟ್ರದಲ್ಲಿ National party ಇವತ್ತು ನೀವು ಈ ತರಹ ಹಾಸನ್ ಜಿಲ್ಲೆಗೆ ಹೋದಾಗ ಶ್ರೀಮತಿ ಸೋನಿಯಾ ಗಾಂಧಿಯವರು ಒಂದು ಕೋಮಿಗೆ ಸಂಬಂಧಪಟ್ಟವರು, ಮಾನ್ಯ ರಾಜಶೇಖರ್ ರೆಡ್ಡಿಯವರು ಒಂದು ಕೋಮಿಗೆ ಸಂಬಂಧಪಟ್ಟವರು, ಆ ರೀತಿಯಾಗಿ ಇವತ್ತು ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ ಇವತ್ತು ನಾವು ಮಾನ್ಯ ಶಂಕರಮೂರ್ತಿಯವರನ್ನು ಕೇಳುತ್ತೇವೆ ಏನು ಅನ್ಯಾಯವಾಗಿದೆ? ನೀವು ಹೇಳಿರುವುದನ್ನು ನಾವು ಕೇಳಿದರೆ ನಮ್ಮ ಪಕ್ಷದ ರಾಷ್ಟ್ರೀಯ ಉನ್ನತ ಮಟ್ಟದ ನಾಯಕರ ಬಗ್ಗೆ ಇವರಿಗೆ ಏನೋ ಹೊಟ್ಟೆ ಉರಿ ಇದೆ, ಇವರು ಏನೇನೋ ಹೇಳುತ್ತಿದ್ದಾರೆ ಶ್ರೀಮತಿ ಇಂದಿರಾಗಾಂಧಿಯವರು ಹೋದರು, ರಾಜೀವಗಾಂಧಿಯವರು ಹೋದರು ಈ ದೇಶದಲ್ಲಿ ಅತ್ತೆ ಮತ್ತು ಗಂಡನನ್ನು ಕಳೆದುಕೊಂಡರು 2004 ರ ಚುನಾವಣೆಯಲ್ಲಿ ಇಡೀ ರಾಷ್ಟ್ರದಲ್ಲಿ ಇವತ್ತಿನ ದಿವಸ ಬಿಜೆಪಿಗೆ ತಕ್ಕ ಪಾಠವನ್ನು ಕಲಿಸಿದಂಥ ಶ್ರೀಮತಿ ಸೋನಿಯಾಗಾಂಧಿಯವರ ಮೇಲೆ ಈ ತರಹದ vengence ನಿಂದ ಮಾತನಾಡುವಂಥ ಹಕ್ಕಿಲ್ಲ

**ಶ್ರೀ ಕೆ ಎಸ್ ಈಶ್ವರಪ್ಪ** – ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಅವರು ಮಾತನಾಡುತ್ತಿರುವ ಅವತಾರಗಳನ್ನು ನೋಡಿದರೆ

**(ಗೊಂದಲ)**

**ಅಧ್ಯಕ್ಷರು** – I am only eye witness ಏನು ಬೇಕಾದರೂ ಅವರೂ ಹೇಳಬಹುದು, ನೀವು ಹೇಳಬಹುದು

**(ಗೊಂದಲ)**

**ಶ್ರೀ ಕೆ ಎಸ್ ಈಶ್ವರಪ್ಪ** – ನೀವು ಅವರಿಗೆ ಪರ್ಮಿಶನ್ ಕೊಟ್ಟಿಲ್ಲ ಅವರು ಹೇಳುತ್ತಿದ್ದಾರೆ

**ಅಧ್ಯಕ್ಷರು** – ಈ ರೀತಿಯಾದರೆ ಸದನವನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಯಾವಾಗಲೂ ನಿಯಮಾವಳಿಗಳ ಪ್ರಕಾರ

ಹೋಗಬೇಕಾಗುತ್ತದೆ ಏಕೆ ನಮ್ಮ ವಿರೋಧ ಪಕ್ಷದ ನಾಯಕರು ಈ ರೀತಿ ಮಾಡುತ್ತಿದ್ದಾರೆ ನನಗೆ ಗೊತ್ತಾಗುತ್ತಿಲ್ಲ

**(ಗೊಂದಲ)**

ಸ್ವಲ್ಪ ಕಡಿಮೆ ಧ್ವನಿಯಲ್ಲಿ ಕೂಗಿ, ನೀವು ಜಾಸ್ತಿ ಕೂಗಿದರೆ ನಾನು ಹೆದರಿ ಬಿಡುತ್ತೇನೇನ್ರಿ? ನಾನು ನಿಮ್ಮ ನಾಯಕರಿಗೆ ಹೇಳಿದೆ ಈ ವಿಷಯವನ್ನು ಲಂಚ್ ಆದ ಮೇಲೆ ತೆಗೆದುಕೊಳ್ಳೋಣ, ನೀವು ಕಮೆನ್ಸ್ ಮಾಡಿ ಎಂದು ಹೇಳಿದಿರಿ ಆಮೇಲೆ ಅವರು ಕಾವೇರಿ ವಿಚಾರವನ್ನು ಎತ್ತಿದರು ಯಾವಾಗಲೂ ಈ ತರಹ ಆದರೆ, ಇದು ಏನು ಸಭೆಯಾ? ಮಾರ್ಗದರ್ಶನ ಮಾಡಬೇಕಾದವರೇ ಈ ರೀತಿ ಮಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಡಿ ಕೆ ಶಿವಕುಮಾರ್** – Higher Education Minister ರವರು ಆ ರೀತಿ ಹೇಳಬಹುದಾ?

**(ಗೊಂದಲ)**

**ಅಧ್ಯಕ್ಷರು** – Higher Education Minister ನ್ನು ಕೇಳುವುದು ಇದ್ದರೆ ಕೇಳಿ ಸೂಕ್ತಕಾಲದಲ್ಲಿ ಅದನ್ನು ಕೇಳಿ ಅವರು ಇಲ್ಲಿ ಬಂದು Answer ಮಾಡುತ್ತಾರೆ ಈ ತರಹ ಆದರೆ ಹೇಗೆ?

**(ಗೊಂದಲ)**

**ಶ್ರೀ ಎಂ ಪಿ ಪ್ರಕಾಶ್ (ಗೃಹ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)** – ಸನ್ಮಾನ್ಯ ಅಧ್ಯಕ್ಷರೆ

**ಶ್ರೀ ಡಿ ಕೆ ಶಿವಕುಮಾರ್** – ಮಾನ್ಯ ಸಚಿವರಾದ ಶ್ರೀ ಶಂಕರಮೂರ್ತಿ ಯವರಿಂದ ಒಂದು statement ಮಾಡಿಸಬೇಕು ಏನು ಜಾತಿಕಾರಣ ಮಾಡುತ್ತಾರಾ?

**(ಗೊಂದಲ)**

**ಶ್ರೀ ಆರ್ ವಿ ದೇಶಪಾಂಡೆ** – ಜಾತಿಯ ಆಧಾರದ ಮೇಲೆ ಆಪಾದನೆಯನ್ನು ಮಾಡಿರುವುದು ಸರಿಯೇನು?

**ಅಧ್ಯಕ್ಷರು** – ನಾನು Fundamental ಆಗಿ ಹೇಳುವುದು, ನಾನು ಅವಕಾಶವನ್ನು ಕೊಡುವುದಿಲ್ಲವೆಂದು ರಿಪಿಟೆಡ್ ಆಗಿ ಹೇಳಿದರೂ ಕೂಡ ನೀವು ಮತ್ತೆ ಮತ್ತೆ ಅದನ್ನು violate ಮಾಡಿ, ನೀವು ಎತ್ತಿದ್ದೀರಿ, ನಾನು ವಿರೋಧಪಕ್ಷದ ನಾಯಕರಿಗೆ **"ನೀವು ಕೆಟ್ಟ ಸಂಪ್ರದಾಯವನ್ನು ಹಾಕುತ್ತಿದ್ದೀರಿ, ಬೇಡ"** ಎಂದು ಹೇಳಿದ್ದೇನೆ ಮಾನ್ಯ ವಾಟಾಳ್ ನಾಗರಾಜುರವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟೆ ಈ ಬಗ್ಗೆ ಮಾತನಾಡುವುದಕ್ಕೆ ಮಧ್ಯಾಹ್ನ ಅವಕಾಶವನ್ನು ಕೊಡುತ್ತೇನೆ ನೀವು ಈಗ ಬಜೆಟ್ ಮೇಲೆ ಪ್ರಸ್ತಾಪ ಮಾಡಿ ಎಂದು ರಿಕ್ವೆಸ್ಟ್ ಮಾಡುತ್ತಿದ್ದೇನೆ ಈ ತರಹ ಆದರೆ ಹೇಗೆ? ಬಜೆಟ್ ಮೇಲೆ ಚರ್ಚೆಯಾಗಬೇಕಲ್ಲವೇ ಸ್ವಾಮಿ?

(ಗೊಂದಲ)

**ಶ್ರೀ ಬಿ ಶಿವರಾಂ** – ಮಾನ್ಯ ಅಧ್ಯಕ್ಷರೆ proposal ನ್ನೇ ಸರ್ಕಾರಕ್ಕೆ ಕಳುಹಿಸಿಲ್ಲವೆಂದರೆ ಹೇಗೆ?

**ಅಧ್ಯಕ್ಷರು** – ಆಯಿತು, ಶಿವರಾಂರವರೆ, ಅದಕ್ಕಾಗಿ ತಮಗೆ ಯಾವಾಗ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕೋ ಕೊಡುತ್ತೇನೆ ಈ ತರಹ ಆದರೆ ಹೇಗೆ?

**ಶ್ರೀ ಎನ್ ಧರ್ಮಸಿಂಗ್** – ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ ನಾನು ಆಭಾರಿಯಾಗಿದ್ದೇನೆ ಆದರೆ ಇವತ್ತು ನನ್ನ ಪ್ರಶ್ನೆಗೆ ಉತ್ತರ ಕೊಡಬೇಕು ನಮ್ಮ ಪಕ್ಷದ ಉನ್ನತ ಸ್ಥಾನದಲ್ಲಿರುವ ನಾಯಕಿ ಮೇಲೆ ಹಿಂದಿನ ಬಾಗಿಲಿನಿಂದ ಬಂದಂತಹ ಉನ್ನತ ಶಿಕ್ಷಣ ಸಚಿವರು ಆಪಾದನೆ ಮಾಡಿದ್ದಾರೆ

**ಅಧ್ಯಕ್ಷರು** – ನಾನು ಏನು ಹೇಳುವುದೆಂದರೆ, ಈ ವಿಚಾರದ ಬಗ್ಗೆ ನೀವು ಪದೇ ಪದೇ ಮಾತನಾಡುತ್ತಿದ್ದೀರಿ ಆಮೇಲೆ ಸಾಯಂಕಾಲ ಆ ವಿಚಾರವನ್ನು ಎತ್ತಿ

**ಶ್ರೀ ಎನ್ ಧರ್ಮಸಿಂಗ್** – ಮಾನ್ಯ ಶಂಕರಮೂರ್ತಿಯವರು ಉನ್ನತ ಶಿಕ್ಷಣ ಸಚಿವರಾಗಿ

**ಶ್ರೀ ಕೆ ಎಸ್ ಈಶ್ವರಪ್ಪ** – ಅವರು ಜಾತಿ ವಿಚಾರ ಮಾತನಾಡಿದ್ದಾರಾ?

**ಶ್ರೀ ಎನ್ ಧರ್ಮಸಿಂಗ್** – ಅವರು ಕ್ಷಮಾಯಾಚನೆಯನ್ನು ಕೇಳಬೇಕು

**ಶ್ರೀ ಕೆ ಎಸ್ ಈಶ್ವರಪ್ಪ** – ಬಜೆಟ್ ಭಾಷಣದಲ್ಲಿ ಜಾತಿ ವಿಚಾರವನ್ನು ಪ್ರಸ್ತಾಪ ಮಾಡಬಹುದು

**ಶ್ರೀ ಬಿ ಶಿವರಾಂ** – ಬಜೆಟ್ ಭಾಷಣದಲ್ಲಿ ಜಾತಿ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಬರುತ್ತದೆಯೇ?

**(ಗೊಂದಲ)**

**ಅಧ್ಯಕ್ಷರು** – ನಿಮಗೆ ನಿಯಮ ಇಲ್ಲವೇ?

**ಶ್ರೀ ಡಿ ಕೆ ಶಿವಕುಮಾರ್** – ಜಾತಿಯ ಬಗ್ಗೆ ಹೇಳಬಹುದೇ?

**ಅಧ್ಯಕ್ಷರು** – ನೀವು ಹೇಳಿಲ್ಲವೇ

**ಶ್ರೀ ಆರ್ ವಿ ದೇಶಪಾಂಡೆ** – ಮಾನ್ಯ ಉನ್ನತ ಶಿಕ್ಷಣ ಸಚಿವರು ಇಲ್ಲಿ ಬರಬೇಕು ಕ್ಷಮೆ ಯಾಚನೆ ಮಾಡಬೇಕು

**(ಗೊಂದಲ)**

**ಶ್ರೀ ಬಿ ಶಿವರಾಂ** – ಯಾವುದೇ ಕಾರಣಕ್ಕೂ ಕೂಡ ಕೇಂದ್ರ ಸರ್ಕಾರಕ್ಕೆ ಕಳುಹಿಸಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ

**ಶ್ರೀ ಎಂ ಪಿ ಪ್ರಕಾಶ್** – ಸದನವನ್ನು ಬಹಳ ಘನತೆಯಿಂದ ನಡೆಸಿಕೊಂಡು ಹೋಗುತ್ತಿದ್ದೀರಿ ನಿಯಮಾವಳಿಗಳ ಪ್ರಕಾರ ನಡೆಯಬೇಕೆಂದು ತಾವು ಯಾವಾಗಲೂ ಕೂಡ ಪ್ರಸ್ತಾಪ ಮಾಡುತ್ತಿದ್ದೀರಿ ಶೂನ್ಯವೇಳೆಯಲ್ಲಿ ಈ ವಿಚಾರಗಳನ್ನು ಎತ್ತುವುದಕ್ಕೆ ಆಗುವುದಿಲ್ಲ ಅದು ಇಲ್ಲವೆಂದು ಯಾರು ಹೇಳುತ್ತಾರೆ ಅದಕ್ಕಾಗಿ permission ಕೊಟ್ಟರು ಆದ್ದರಿಂದ ಶೂನ್ಯ ವೇಳೆಯಲ್ಲಿ ಈ ರೀತಿಯ ಚರ್ಚೆಗೆ ಅವಕಾಶವಿಲ್ಲ ಶೂನ್ಯ ವೇಳೆಯಲ್ಲಿ ವಿರೋಧಪಕ್ಷದ ನಾಯಕರು ನಿಮ್ಮ ಪರವಾಗಿ ತಾವು

ಕಳುಹಿಸಿರುವಂತಹ ನೋಟೀಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಈಗ ತಮ್ಮಲ್ಲಿಯೂ ಕೂಡ ಅನೇಕ ಕಡೆಗೆ

**ಶ್ರೀ ಡಿ ಕೆ ಶಿವಕುಮಾರ್** – ನಾವು ಬೈಯಿಸಿಕೊಳ್ಳುವುದಕ್ಕೆ ಕುಳಿತಿದ್ದೀವಾ? ಆಗಲ್ಲಾ ಸ್ವಾಮಿ, ಅವರು ಹೇಳಿದ ಹಾಗೆ ಬೈಯಿಸಿಕೊಳ್ಳುವುದಕ್ಕೆ ಆಗುವುದಿಲ್ಲ

**ಶ್ರೀ ಎಂ ಪಿ ಪ್ರಕಾಶ್** – ಈಗ ಸೋನಿಯಾ ಗಾಂಧಿಯವರಾಗಲಿ, ಅಥವಾ ಇನ್ಯಾರೋ ನಾಯಕರು ಆಗಲಿ ಯಾರು ಅಪಾದನೆ ಮಾಡತಕ್ಕದ್ದಲ್ಲ ಈಗ ಗಂಭೀರವಾಗಿ ಚರ್ಚೆ ನಡೆಯುತ್ತಿದೆ

**ಶ್ರೀ ಬಿ ಎಸ್ ಯಡಿಯೂರಪ್ಪ** – ಮಾನ್ಯ ಶಂಕರಮೂರ್ತಿಯವರು ಅಸತ್ಯವಾದುದನ್ನು ಏನು ಹೇಳಿದ್ದಾರೆ ಅದನ್ನು ಸಭೆಗೆ ಹೇಳಿ ಪತ್ರಿಕೆಯನ್ನು ಓದಿ ಅದರಲ್ಲಿ ಅಸತ್ಯವಾದುದನ್ನು, ಸತ್ಯಕ್ಕೆ ದೂರವಾದುದು ಏನಿದೆ ಅದನ್ನು ಹೇಳಿ ಅಲ್ಲಿ ಮುಖ್ಯಮಂತ್ರಿಯವರು, ಸೋನಿಯಾ ಗಾಂಧಿಯವರು ಒಂದೇ ಜನಾಂಗದವರು, ಒಂದೇ ಪಾರ್ಟಿಯವರು ಎಂದು ಹೇಳಿದ್ದಾರೆ ಅದರಲ್ಲಿ ಏನು ಅಪರಾಧ ಇದೆ? ಅದರಲ್ಲಿ ಏನು ಇದೆ ಹೇಳಿ

**ಶ್ರೀ ಎನ್ ಧರ್ಮಸಿಂಗ್** – We condemn your statement ಯಡಿಯೂರಪ್ಪನವರೇ ಏನು ಮಾತನಾಡುತ್ತಿದ್ದೀರಿ

**(ಗೊಂದಲ)**

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಧರಣಿ ನಿರತರಾಗಿ ಘೋಷಣೆಯನ್ನು ಕೂಗುತ್ತಿದ್ದರು)**

**(ಗೊಂದಲ)**

**ಅಧ್ಯಕ್ಷರು** – ಈಗ ಕೇಳಿ,

**ಶ್ರೀ ಆರ್ ವಿ ದೇಶಪಾಂಡೆ** :– ಹಾಗಾದರೆ ಅಧಿಕಾರ ನಮಗೆ ಇಲ್ಲ

**ಶ್ರೀ ಎಂ ಪಿ ಪ್ರಕಾಶ್** – ಅದು ಏನಾದರೂ ಇರಲಿ,

**(ಗೊಂದಲ)**

**ಶ್ರೀ ಬಿ ಎಸ್ ಯಡಿಯೂರಪ್ಪ** – ಮಾನ್ಯ ಶಂಕರಮೂರ್ತಿಯವರನ್ನು ಕರೆಸೋಣ ಇದರ ಬಗ್ಗೆ ಚರ್ಚೆ ಮಾಡೋಣ

**(ಗೊಂದಲ)**

**ಅಧ್ಯಕ್ಷರು** – ನಾನು ತಮ್ಮಲ್ಲಿ ಒಂದು ವಿನಂತಿಯನ್ನು ಮಾಡುತ್ತೇವೆ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಬೇರೆ ಸೂಚನೆಯನ್ನು ಕೊಡಿ ಈಗ ಆಗಲ್ಲ ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ಬೇರೆ ಸೂಚನೆಯನ್ನು ಕೊಡಿ, ನಾನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ ಇದರ ಬಗ್ಗೆ ಶಂಕರಮೂರ್ತಿಯವರು ಏನು ಮಾತಾಡ್ತಾರೆ? ಈ ತರಹ ಆದರೆ ಏನು? ನಿಮಗೆ ಸಭೆ ನಡೆಸುವ ಬಗ್ಗೆ ಇಷ್ಟವಿಲ್ಲ ನೀವು ವಿರೋಧಪಕ್ಷದ ನಾಯಕರಾಗಿ, ನೀವು ಕೆಟ್ಟ ಸಂಪ್ರದಾಯವನ್ನು ಹಾಕುತ್ತಿದ್ದೀರಿ ಇದು ಸರಿಯಲ್ಲ ಮಾನ್ಯ ಸಂಸದೀಯ ಸಚಿವರು ಸರ್ಕಾರದ ಪರವಾಗಿ ಏನಾದರೂ ಹೇಳುವುದು ಇದೆಯೇ?

**ಶ್ರೀ ಎಂ ಪಿ ಪ್ರಕಾಶ್** – ಸನ್ಮಾನ್ಯ ಅಧ್ಯಕ್ಷರೆ, ಯಾವುದಾದರೂ ಪತ್ರಿಕಾ ಹೇಳಿಕೆಯ ಮೇಲೆ ನಾವು ಚರ್ಚೆ ಮಾಡಿರುವಂತಹದ್ದು, ನಿಯಮಾವಳಿಗಳ ಪ್ರಕಾರ ಪತ್ರಿಕಾ ಹೇಳಿಕೆಯನ್ನು ಅಧಾರವಾಗಿಟ್ಟುಕೊಂಡು ಚರ್ಚೆ ಮಾಡುವುದರ ಬಗ್ಗೆ ಅನೇಕ ಬಾರಿ ಸ್ಪೀಕರ್‌ರವರು ತೀರ್ಮಾನವನ್ನು ಕೊಟ್ಟಿದ್ದಾರೆ

**ಅಧ್ಯಕ್ಷರು** – ನಾನು ವಿರೋಧಪಕ್ಷದ ನಾಯಕರು ಮತ್ತು ಎಲ್ಲಾ ವೆಲ್‌ನಲ್ಲಿರುವಂತಹ ಎಲ್ಲಾ ಸ್ನೇಹಿತರುಗಳಿಗೆ ಅರಿಕೆ ಮಾಡಿಕೊಳ್ಳುವುದೇನೆಂದರೆ, ಇದನ್ನು ಶೂನ್ಯವೇಳೆಯಲ್ಲಿ ಇದನ್ನು ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ ಈ ವಿಚಾರ ಚರ್ಚೆಯಾಗಬೇಕೆಂದರೆ, ಬೇರೆ ಒಂದು ಸೂಚನೆಯನ್ನು ಕಳುಹಿಸಿ ಅದಕ್ಕೆ ನಾನು ಅವಕಾಶವನ್ನು ಮಾಡಿಕೊಡುತ್ತೇನೆ ಈಗ ನಾಯಕರು ಬಜೆಟ್ ಮೇಲೆ ಆರಂಭ ಮಾಡಲಿ ಅದು ಸರಿಯಾದ ಕ್ರಮ ನೀವು ಈ ರೀತಿ ಮಾಡಿದರೆ ಏನಾಗುತ್ತದೆ ಎಂದರೆ, ಸದನವನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ ಯಾವುದು ಕೂಡ ಸರಿಯಾಗಿ ನಡೆಯುವುದಿಲ್ಲ

**ಶ್ರೀ ಎಂ ಪಿ ಪ್ರಕಾಶ್** – ಬಹಳ ಮುಖ್ಯವಾಗಿರುವಂತಹ ವಿಷಯಗಳು,

ಅದರಲ್ಲಿ ಬಜೆಟ್ ವಿಷಯದಲ್ಲಿ ನಿನ್ನೆ ಕೂಡ ನಾವು ಮಾತನಾಡಿದ್ದೇವೆ ಬಜೆಟ್ ಬಗ್ಗೆ ಬಹಳ ಚರ್ಚೆ ಆಗಬೇಕಾಗಿದೆ ಒಂದು ಪತ್ರಿಕಾ ಹೇಳಿಕೆಯ ಸತ್ಯಾಸತ್ಯತೆಯ ಬಗ್ಗೆ ಸಂಬಂಧಪಟ್ಟಿರುವವರು ಈ ಬಗ್ಗೆ ಮಾತನಾಡಬೇಕಾಗುತ್ತದೆ ಈ ಬಗ್ಗೆ ಸಂಬಂಧಪಟ್ಟವರನ್ನು ನಾವು ಕೇಳಬೇಕಾಗುತ್ತದೆ ಪತ್ರಿಕಾ ಹೇಳಿಕೆ ಸರಿಯಾದುದೇ? ಅದೇ ರೀತಿಯಾಗಿ ಹೇಳಿದ್ದಾರೆಯೇ? ಈ ತರಹದಲ್ಲಿ ಘೋಷಣೆಗಳನ್ನು ಕೂಗಬಾರದು ಆದ್ದರಿಂದ ದಯವಿಟ್ಟು

**(ಸದನದ ಬಾವಿಯಲ್ಲಿ ಧಿಕ್ಕಾರದ ಘೋಷಣೆಯನ್ನು ಕೂಗುತ್ತಿದ್ದರು)**

ಗಂಭೀರವಾದ ಚರ್ಚೆಯನ್ನು ಮಾಡುವುದಕ್ಕೆ ವಿರೋಧಪಕ್ಷವಾದ ಕಾಂಗ್ರೆಸಿಗರಿಗೆ ಸುತರಾಂ ಕೂಡ ಮನಸ್ಸು ಇಲ್ಲವೆಂದು ಆಗುತ್ತದೆ ಬಹಳ ಮುಖ್ಯವಾದಂತಹ ವಿಷಯಗಳು ರಾಜ್ಯದ ಜನತೆಗೆ ಸಂಬಂಧಪಟ್ಟಂತಹ ವಿಷಯಗಳು ಚರ್ಚೆಯಾಗಬೇಕಾದುದರಲ್ಲಿ ಜಯಘೋಷವನ್ನು ಕೂಗುವುದು ಮತ್ತು ಕಾರ್ಯಕಲಾಪಗಳಿಗೆ ಅಡ್ಡಿಯನ್ನುಂಟು ಮಾಡುವುದು ಸರಿಯಾದುದಲ್ಲ ಪತ್ರಿಕಾ ಹೇಳಿಕೆಯ ಮೇಲೆ ನೀವು ಇವತ್ತು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ ಪತ್ರಿಕಾ ಹೇಳಿಕೆಯನ್ನು ನೀಡಿರುವುದು ನಿಜವೋ, ಅಲ್ಲವೋ ಎಂಬ ಬಗ್ಗೆ ಸಂಬಂಧಪಟ್ಟವರನ್ನು ಕರೆಸಿ ಅವರನ್ನು ಕೂಡ ಮಾತನಾಡಿಸುತ್ತೇವೆ ಅಕಸ್ಮಾತ್ ಹೇಳಿಕೆ ನೀಡಿರುವುದು ಸರಿಯಾದುದಲ್ಲವೆಂದರೆ, ಆ ವಿಷಯವನ್ನು ಅಲ್ಲಿಗೆ ಕೈಬಿಡಬಹುದು, ಸರಿಯಾದುದಾಗಿದ್ದರೆ, ಚರ್ಚೆಯಾಗುವಂತಹದ್ದು ಕೂಡ ಆಗಬಹುದು ಈ ಹಿನ್ನೆಲೆಯಲ್ಲಿ ತಾವು ಅವಕಾಶವನ್ನು ಕೊಟ್ಟಿದ್ದೀರಿ ಅದನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ ಶೂನ್ಯ ವೇಳೆಯಲ್ಲಿ ಧರಣಿಗೆ ಬರುವುದು, ಬಾವಿಗೆ ಬೀಳತಕ್ಕಂತಹದ್ದು, ಜಯಘೋಷ ಮಾಡುವಂತದ್ದು, ಸುತರಾಂ ಆಗಿ ಇವತ್ತಿನವರೆಗೂ ನಡೆದಿರುವುದಲ್ಲ ನಮಗೂ ಕೂಡ ಸೋನಿಯಾ ಗಾಂಧಿಯವರ ಬಗ್ಗೆ ಅಭಿಮಾನವಿದೆ ಅಭಿಮಾನವಿದೆ ಎಂದರೆ ಅವರ ಪರವಾಗಿ ಓಟು ಕೇಳುತ್ತೇವೆಂದಲ್ಲ ಒಂದು ಪ್ರಧಾನ ಮಂತ್ರಿ ಪದವಿ ಬಂದಾಗ ರಾಜೀನಾಮೆಯನ್ನು ಕೊಡುತ್ತೇನೆ, ನಾನು ಆಗುವುದಿಲ್ಲವೆಂದು ಹೇಳಿರುವ ಬಗ್ಗೆ ಅವರ ತ್ಯಾಗದ ಬಗ್ಗೆ, ನಾವು ಅಭಿಮಾನವನ್ನು ವ್ಯಕ್ತಮಾಡಿದ್ದೇವೆ ಅದೇ ರೀತಿಯಾಗಿ ಎಲ್ ಕೆ ಅಡ್ವಾಣಿಯವರ ಬಗ್ಗೆಯೂ

ಅಭಿಮಾನ ಪಡುತ್ತೇವೆ, ಹಾಗೂ ಜಿನ್ನಾರವರ ಹೇಳಿಕೆಯು ಬಂದಾಗ ಅದೇ ರೀತಿಯಾಗಿ ವಾಜಪೇಯಿಯವರ ಬಗ್ಗೆ ಅವರ ಮುತ್ಸದ್ದಿತನದ ಬಗ್ಗೆಯೂ ಕೂಡ ನಾವು ಮಾತನಾಡುತ್ತೇವೆ ಶಂಕರಮೂರ್ತಿಯವರು ಸದನಕ್ಕೆ ಬಂದು ಸಹಕರಿಸಿದ ಸಂದರ್ಭದಲ್ಲಿ ಅದನ್ನು ಮಾತನಾಡುತ್ತೇವೆ ಆದರೆ, ಶೂನ್ಯವೇಳೆಯಲ್ಲಿ ಆ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ನಾವು ಏನು ಉತ್ತರವನ್ನು ಕೊಟ್ಟಿದ್ದೇವೆ? ಅವರನ್ನು ಕರೆಸುತ್ತೇವೆ ಕರೆಸಿ ಮಾತನಾಡುವವರೆಗೂ ಕೂಡ ಸಮಯ ನೀಡದಿದ್ದರೆ, ವಿರೋಧ ಪಕ್ಷದ ನಾಯಕರಾಗಿ ನೀವು ಈ ಬಗ್ಗೆ ಮಾರ್ಗದರ್ಶನವನ್ನು ಕೊಡಬೇಕೇ ವಿನಃ ಬಾವಿಯೊಳಗೆ ಬೀಳುತ್ತೀರಿ ಈ ಪತ್ರಿಕಾ ಹೇಳಿಕೆಯನ್ನು ನೀಡಿರುವುದು ನಿಜವಲ್ಲ ಎಂದು ಬಂತು, ಆಗ ಏನು ಹೇಳುತ್ತೀರಿ? ಪತ್ರಿಕಾ ಹೇಳಿಕೆಯನ್ನು ಕೊಟ್ಟಿರುವುದು ಮಾನ್ಯ ಶಂಕರಮೂರ್ತಿಯವರು, ಅವರ ಅಭಿಪ್ರಾಯ ಏನು ಇದೆ ಎಂದು ಮೊದಲು ಕೇಳೋಣ ಅಲ್ಲಿಯವರೆಗೆ ಸಮಾಧಾನವಾಗಿ ಈ ಕಾರ್ಯಕಲಾಪಗಳಿಗೆ ಅಡ್ಡಿಪಡಿಸಿದಂತೆ ದಯವಿಟ್ಟು ಸಹಕಾರವನ್ನು ಕೊಡಬೇಕು

**ಶ್ರೀ ಎನ್ ಧರ್ಮಸಿಂಗ್** :– ಹೇಗೆ ಮಾಡಬೇಕೆಂದು ನೀವೇ ಹೇಳಿ

**ಶ್ರೀ ಎಂ ಪಿ ಪ್ರಕಾಶ್** – ಶೂನ್ಯ ವೇಳೆಯಲ್ಲಿ ತಾವು ಅಥವಾ ರಮೇಶ್‌ಕುಮಾರ್‌ರವರು ಹೇಳಲಿ, ಇದರಲ್ಲಿ ಚರ್ಚೆಗೆ ಅವಕಾಶವಿದೆಯೇ?

**ಶ್ರೀ ಎನ್ ಧರ್ಮಸಿಂಗ್** – ಮತ್ತೆ ಏಕೆ ಅವಕಾಶವನ್ನು ಕೊಟ್ಟರು?

**ಶ್ರೀ ಎಂ ಪಿ ಪ್ರಕಾಶ್** – ಆದರೆ ತಾವು mention ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ ನೀವೂ ಆ ವಿಚಾರವಾಗಿ

**ಅಧ್ಯಕ್ಷರು** – ಯಾರಿಗೂ ಕೊಟ್ಟಿಲ್ಲ

**(ಗೊಂದಲ)**

**ಅಧ್ಯಕ್ಷರು** – ತಾವು ಮಾತನಾಡುತ್ತಿದ್ದೀರಿ, ಅದಕ್ಕೆ

**ಶ್ರೀ ಆರ್ ವಿ ದೇಶಪಾಂಡೆ** – ಮಾನ್ಯ ಗೃಹ ಸಚಿವರು ಈ ಬಗ್ಗೆ ಪಕ್ಷವಾಗಿರಲಿ, ಹಿರಿಯರ ಬಗ್ಗೆ ಗೌರವ ಇರಲಿ

**ಶ್ರೀ ಎಂ ಪಿ ಪ್ರಕಾಶ್** – ನಿಮಗೆ ಗೌರವವಿಲ್ಲ ದೇಶಪಾಂಡೆಯವರೆ, ಕಾರ್ಯಕಲಾಪ ಮಾಡುವುದಕ್ಕೆ ನಿಮಗೆ ಎದೆಗಾರಿಕೆ ಇಲ್ಲ ಎದೆಗಾರಿಕೆ ಇಲ್ಲದೇ ಇರುವದರಿಂದ ಈ ರೀತಿ ಮಾಡುತ್ತಿದ್ದೀರಿ

**(ಗೊಂದಲ)**

**ಶ್ರೀ ಆರ್ ವಿ ದೇಶಪಾಂಡೆ** – ಸೋನಿಯಾಗಾಂಧಿ ಬಗ್ಗೆ ಗೌರವವಿದೆ ಎಂದು ಹೇಳಿದ್ದೀರಿ

**ಶ್ರೀ ಎಂ ಪಿ ಪ್ರಕಾಶ್** – ಈಗಲೇ ಕರೆಸಿ ಎಂದು ಹೇಳುವುದಕ್ಕೆ ಅಧಿಕಾರ ಇದೆಯೇ? ನೀವು ಈಗಲೇ ಕರೆಸಿ ಎಂದು ಹೇಳುತ್ತಿರಲ್ಲ ಈಗಲೇ ಕರೆಸಿ ಮಾತನಾಡಿ ಅಂದರೆ ಏನು?

**(ಗೊಂದಲ)**

**ಶ್ರೀ ಆರ್ ವಿ ದೇಶಪಾಂಡೆ** – ಸೋನಿಯಾ ಗಾಂಧಿಯ ಬಗ್ಗೆ ಗೌರವವಿದೆ, ಗೌರವವಿದ್ದರೆ statement ನ್ನು condemn ಮಾಡಿ ಜಾತಿಯ ಮೇಲೆ ಏತಕ್ಕಾಗಿ ಮಾತನಾಡಬೇಕು? Why is he making statements?

**ಶ್ರೀ ಎಂ ಪಿ ಪ್ರಕಾಶ್** – ಶೂನ್ಯ ವೇಳೆಯಲ್ಲಿ ನೀವು ಏನು ಮಾತನಾಡುತ್ತಿದ್ದೀರಿ?

**ಶ್ರೀ ಆರ್ ವಿ ದೇಶಪಾಂಡೆ** – you condemn the statement ಶಂಕರಮೂರ್ತಿಯವರು ಬೇಕಾದರೆ ಮಧ್ಯಾಹ್ನ ಬರಲಿ you condemn the statement

**ಶ್ರೀ ಎಂ ಪಿ ಪ್ರಕಾಶ್** – ಅವರು ಹೇಳುವುದಕ್ಕೆ ಅವಕಾಶವನ್ನು ಕೊಡಬೇಕಲ್ಲವೇ? ಅದು ಬಿಟ್ಟು ಬಾವಿಗೆ ಬೀಳುವುದು ಸರಿಯಲ್ಲ ತಾವು ನಿಯಮಾವಳಿಗಳ ಪ್ರಕಾರ ಎತ್ತಿದ್ದೀರಿ, ಅದಕ್ಕಾಗಿ ಬಾವಿಗೆ ಬೀಳಬೇಕೆ? ಚರ್ಚೆ ಮಾಡುವುದಕ್ಕೆ ಬರಬೇಕೆ? ಈ ಬಗ್ಗೆ ಘೋಷಣೆಯನ್ನು ಕೂಗಬೇಕೆ? ಘೋಷಣೆಯನ್ನು ಕೂಗಿದರೆ ಗಂಟಲು ಜಾಸ್ತಿ ಇದೆ ಎಂದು ಗೊತ್ತಾಗಿ ಬಿಡುತ್ತದೆಯೇ?

**ಶ್ರೀ ಆರ್ ವಿ ದೇಶಪಾಂಡೆ** – ಹಾಗಲ್ಲ ಸಾರ್

**ಶ್ರೀ ಎಂ ಪಿ ಪ್ರಕಾಶ್** – ಇನ್ನೇನು ಸಾರ್ ಇದು

**ಶ್ರೀ ಆರ್ ವಿ ದೇಶಪಾಂಡೆ** – ಇದು ಜೋರಲ್ಲ ನಿಮ್ಮ ಭಾಷೆ ನಮಗೆ ಬರುವುದಿಲ್ಲ

**ಶ್ರೀ ಎಂ ಪಿ ಪ್ರಕಾಶ್** – ನಾವು ಅವರನ್ನು ಕರೆಸುತ್ತೇವೆ ಪತ್ರಿಕಾ ಹೇಳಿಕೆ ಸರಿ ಇದೆಯೋ ಅಥವಾ ತಪ್ಪು ಇದೆಯೋ ಅದರ ಬಗ್ಗೆ ಚರ್ಚೆ ಮಾಡೋಣ

**ಶ್ರೀ ಆರ್ ವಿ ದೇಶಪಾಂಡೆ** – O K

**ಅಧ್ಯಕ್ಷರು** – ನೀವುಗಳು ನಿಮ್ಮ ಸ್ಥಾನಗಳಿಗೆ ಹೋಗಿ ದಯಮಾಡಿ

**ಶ್ರೀ ಎನ್ ಧರ್ಮಸಿಂಗ್** – ಸೋನಿಯಾ ಗಾಂಧಿಯವರ ಮೇಲೆ ವಿನಃಕಾರಣ ಹೇಳಿಕೆಯನ್ನು ಕೊಡುವುದು ಸರಿಯಲ್ಲ

**(ಗೊಂದಲ)**

**ಅಧ್ಯಕ್ಷರು** – ಏಕೆ ಈ ರೀತಿಯಾಗಿ ಮಾಡುತ್ತಿದ್ದೀರಿ ನೀವೆಲ್ಲರೂ ಆರು ಸಾರಿ ಗೆದ್ದು ಬಂದಿರುವವರು

**ಶ್ರೀ ಆರ್ ವಿ ದೇಶಪಾಂಡೆ** – ಈ ಬಗ್ಗೆ ತಾವು ಹೇಳಿ

**ಅಧ್ಯಕ್ಷರು** – ನೀವು ದಯಮಾಡಿ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ನಾನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೇನೆ ಅವರನ್ನು ಕರೆಸೋಣ ಅವರು ಏನು ಹೇಳುತ್ತಾರೆಂದು ಕೇಳೋಣ

**ಶ್ರೀ ಡಿ ಕೆ ಶಿವಕುಮಾರ್** – ಕರೆಸುತ್ತೀರೆಂದು ಹೇಳುತ್ತೀರಿ ಯಾವಾಗ?

**ಅಧ್ಯಕ್ಷರು** – ನಿಮಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ ನೀವು ಒಂದು ಸೂಚನೆಯನ್ನು ಕೊಡಿ ನೀವು ಸುಮ್ಮನೆ ಏತಕ್ಕೆ ಕೂಗಾಡುತ್ತಿದ್ದೀರಿ?

**ಶ್ರೀ ಎನ್ ಧರ್ಮಸಿಂಗ್** – ಯಾವುದರ ಮೇಲೆ ಮಾಡಿದ್ದಾರೆ, ಎಲ್ಲಿ ಮಾಡಿದ್ದಾರೆ

**ಅರಗ ಜ್ಞಾನೇಂದ್ರ** – ಚರ್ಚೆ ಮಾಡೋಣ ಬನ್ನಿ

**ಅಧ್ಯಕ್ಷರು** – ಇದೇ ಒಂದು ಸಂಪ್ರದಾಯವಾಗಿ ಬಿಡುತ್ತದೆ

**(ಈ ಹಂತದಲ್ಲಿ ಶ್ರೀನಿವಾಸಗೌಡರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)**

**ಅಧ್ಯಕ್ಷರು** – ಶ್ರೀನಿವಾಸಗೌಡರೆ, ನೀವು ಏನೆಂದರೆ ದೊಡ್ಡ ಗಂಟಲು ಇದೆ ಎಂದು ಬಾಯಿಗೆ ಏನು ಬರುತ್ತದೆಯೋ ಅದನ್ನೆ ಮಾತನಾಡುತ್ತೀರಿ ನಾನು ರೀಪಿಟೆಡ್ ಆಗಿ ಹೇಳುತ್ತಿದ್ದೇನೆ ಅವರನ್ನು ಕರೆಸುತ್ತೇನೆ ನೀವುಗಳು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಎಂದರೆ ನೀವುಗಳು ಕೇಳುತ್ತಿಲ್ಲವಲ್ಲ

**ಶ್ರೀ ಎನ್ ಧರ್ಮಸಿಂಗ್** – ಏನು ಮಾತನಾಡುತ್ತಿದ್ದೀರಿ?

**ಅಧ್ಯಕ್ಷರು** – ಏನಾಗಿದೆ ಅಂದರೆ, ನಮ್ಮ ಹಳ್ಳಿಯಲ್ಲಿ ಹೇಳುತ್ತಾರೆ, ಜುಟ್ಟು ಹಿಡಿದುಕೊಂಡು ಹಡೆದಂಗೆ ಎಂದು ಆ ತರಹ ನಿಮ್ಮ ಕಥೆಯಾಗಿದೆ ಈ ರೀತಿ ಮಾಡಿದರೆ ಹೇಗೆ ಆಗುತ್ತದೆ? ನಾನು ಸೂಚನೆ ಕೊಟ್ಟು ಅವರನ್ನು ಕರೆಸುತ್ತೇನೆ ತಮ್ಮ ಸ್ಥಾನಗಳಿಗೆ ಹೋಗಿ ಎಂದರೆ ಕೇಳುತ್ತಿಲ್ಲವಲ್ಲಾ ನಂಬಿಕೆ ಇರಬೇಕು ಪರಸ್ಪರ ನಂಬಿಕೆ ಇಲ್ಲದೆ ಇದ್ದರೆ ಹೇಗೆ? ಈ ತರಹ ಆದರೆ ಹೇಗೆ ತಾವು ಹೇಳಬೇಕು ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ

**( ಸಭೆಯು 12 ಗಂಟೆ 07 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 10 ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿಶ್ಚಯಿಸಿತು)**

**ಸಭೆಯು ಮತ್ತೆ ಮಧ್ಯಾಹ್ನ 12 49 ಗಂಟಗೆ ಸಮಾವೇಶಗೊಂಡಿತು**
**(ಮಾನ್ಯ ಸಭಾಧ್ಯಕ್ಷರಾದ ಶ್ರೀ ಕೃಷ್ಣ ಅವರು ಪೀಠವನ್ನು ಅಲಂಕರಿಸಿದರು )**

**ಅಧ್ಯಕ್ಷರು** – ಈಗ ರಮೇಶ್ ಕುಮಾರ್ ಅವರು ಏನು ಮಾತನಾಡಿದ್ದಾರೆ ಎನ್ನುವುದನ್ನು ನಾನು ನೋಡಿದ್ದೇನೆ ಅದರಲ್ಲಿ ಆಕ್ಷೇಪಾರ್ಹವಾದ ಪದಗಳೇನೂ ಇಲ್ಲ ಆದ್ದರಿಂದ ಆ ವಿಚಾರವನ್ನು ಮುಕ್ತಾಯ ಮಾಡಲಾಗಿದೆ ಈಗ ಏನು ಶಂಕರಮೂರ್ತಿಯವರ ಬಗ್ಗೆ ಒಂದು ಚರ್ಚೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪವಾಗಿತ್ತು, ಅದನ್ನು ಬೇರೆ ನಿಯಮಾವಳಿಗಳ ಪ್ರಕಾರ ಚರ್ಚೆ ಮಾಡೋಣ

**ಶ್ರೀ ಮಲ್ಲಿಕಾರ್ಜುನ ಖರ್ಗೆ** – Zero Hour ನಲ್ಲಿ ಏಕೆ ಕೊಟ್ಟಿತ್ತು ಎಂದರೆ, ಒಬ್ಬರು Cabinet ಸಚಿವರು ಏನು ಮಾತನಾಡಬೇಕು, ಏನು ಮಾತನಾಡಬಾರದು ಎನ್ನತಕ್ಕಂಥಾದ್ದು at least ವಿವೇಚನೆ ಇಟ್ಟುಕೊಂಡು ಹೇಳಬೇಕು

**ಅಧ್ಯಕ್ಷರು** – ನೀವೆಲ್ಲರೂ ಹೊರಗಡೆ ಹೋದ ಮೇಲೆ ಶಂಕರಮೂರ್ತಿಯವರು ಬಂದರು ಆದರೆ, ಅಷ್ಟರೊಳಗೆ ತಾವೆಲ್ಲರೂ ಹೊರಗಡೆ ಹೋಗಿದ್ದಿರಿ

**ಶ್ರೀ ಮಲ್ಲಿಕಾರ್ಜುನ ಖರ್ಗೆ** – ಇಲ್ಲ, ಅವರು ನಿಮಾನ್ಸ್‌ಗೆ ಹೋಗಿದ್ದರೆಂದು ನನಗೆ ಗೊತ್ತಾಯಿತು

**ಶ್ರೀ ಕೆ ಎಸ್ ಈಶ್ವರಪ್ಪ** – ಅಧ್ಯಕ್ಷರೆ, ಇವರಿಗೆ ಬಾಯಿಗೆ ಬಂದಂತೆ ಮಾತನಾಡುವುದಕ್ಕೆ ಅವಕಾಶ ಕೊಡಬೇಡಿ ಇವರಿಗೆ ಹುಚ್ಚು ಹಿಡಿದಿದೆ ಎಂದು ಹೇಳಬೇಕಷ್ಟೇ

(ಗೊಂದಲ)

**ಶ್ರೀ ಕೆ ಎಸ್ ಈಶ್ವರಪ್ಪ** – ಮೊದಲು ಇವರನ್ನು ಹುಚ್ಚಾಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿ

**ಅಧ್ಯಕ್ಷರು** – ಖರ್ಗೆಯವರೆ, ಅದು ಅಲ್ಲಿಗೆ ಮುಕ್ತಾಯವಾಗಿದೆ ನೀವು ಸೂಚನೆ ಕೊಡಿ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡೋಣ ಶಂಕರಮೂರ್ತಿಯವರು ಏನು ಹೇಳಬೇಕೋ ಹೇಳುತ್ತಾರೆ ಆದುದರಿಂದ, ಚರ್ಚೆಯಾಗಲಿ

(ಗೊಂದಲ)

**ಶ್ರೀ ಕೆ ಎಸ್ ಈಶ್ವರಪ್ಪ** .– ನೀವು ಬೇಕಾದಷ್ಟು ಚರ್ಚೆ ಮಾಡಿ ಅದು ಬಿಟ್ಟು ಬೇಕಾದಂತೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಇವರು ಆಡಿದ್ದೆಲ್ಲವೂ ಇಲ್ಲಿ ಆಟವಾಗುವುದಿಲ್ಲ ಇವರು ಹೇಳಿದ್ದನ್ನೆಲ್ಲಾ ಕೇಳಿಕೊಂಡು ಕುಳಿತುಕೊಳ್ಳುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ

**ಅಧ್ಯಕ್ಷರು** – ಇಲ್ಲಿಗೆ ಆ ವಿಚಾರವನ್ನು ಮುಕ್ತಾಯ ಮಾಡಿದ್ದೇನೆ ಯಾವುದಾದರೂ ಸೂಚನೆ ಕಳುಹಿಸಿ ನಾನು ಅದಕ್ಕೆ ಒಂದು date ಕೊಡುತ್ತೇನೆ ಬಜೆಟ್ ಮೇಲೆ ಚರ್ಚೆ ಆರಂಭವಾಗಬೇಕಾಗಿತ್ತು, ಅದನ್ನು ಈಗ ಆರಂಭಿಸೋಣ ಈಗ ವಿರೋಧ ಪಕ್ಷದ ನಾಯಕರು ಪ್ರಾರಂಭಿಸಬೇಕು

**(ಇ) ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಉಪಕುಲಪತಿಗಳ ವಿರುದ್ಧ ನಡೆದಂತಹ ಪ್ರತಿಭಟನೆ ಬಗ್ಗೆ –**

**ಶ್ರೀ ಹೆಚ್ ಎಂ ವಿಶ್ವನಾಥ್** – ಅಧ್ಯಕ್ಷರೆ, ನಾನು ಒಂದು ಪತ್ರ ಕೊಟ್ಟಿದ್ದೆ ಒಂದೇ ನಿಮಿಷದಲ್ಲಿ ನಾನು ಮಾತನಾಡುತ್ತೇನೆ

**ಅಧ್ಯಕ್ಷರು** – ನಾಳೆ ಅವಕಾಶ ಕೊಡೋಣ ಈಗಾಗಲೇ ತೀರ್ಮಾನವಾಗಿದೆ ಈಗ ಆರಂಭ ಮಾಡಬೇಕು ನಾನು ತಮಗೆ ನಾಳೆ ಅವಕಾಶ ಮಾಡಿಕೊಡುತ್ತೇನೆ

**ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ)** – ಮಾನ್ಯ ಅಧ್ಯಕ್ಷರೆ, ನಿನ್ನೆ ಬೆಂಗಳೂರಿನಲ್ಲಿರುವ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿಶ್ವವಿದ್ಯಾನಿಲಯದ ಒಬ್ಬ ಉಪಕುಲಪತಿಗಳ ವಿರುದ್ಧ ಪ್ರತಿಭಟನೆ ಮಾಡುವಂತಹ ಸಂದರ್ಭದಲ್ಲಿ, ಅದು ಹಿಂಸಾಚಾರಕ್ಕೆ ತಿರುಗಿ, ಲಾಠಿ ಚಾರ್ಜ್ ಆಗಿ ವಿದ್ಯಾರ್ಥಿಗಳ ಮೇಲೆ, ಬಹಳ ದೊಡ್ಡ ಹಲ್ಲೆಯಾಗಿ, 8–9 ವಿದ್ಯಾರ್ಥಿಗಳ ಬಂಧನವಾಗಿದ್ದು, ಅವರು ಜೈಲಿನಲ್ಲಿದ್ದಾರೆ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಶಿಕ್ಷಣ ಕ್ಷೇತ್ರ ಬಹಳ ಮಹತ್ವವಾದುದು ನಮ್ಮ ಸರ್ಕಾರದ ವತಿಯಿಂದ ಇರಬಹುದು, ಸಮಾಜದಲ್ಲಿಯೂ ಇರಬಹುದು ಶಿಕ್ಷಣ ಕ್ಷೇತ್ರದಲ್ಲಿ ಈ ರೀತಿಯ ಘಟನೆಗಳು ನಡೆಯುವಂಥಾದ್ದು ಯಾವುದೇ ಸರ್ಕಾರಕ್ಕೆ ಆಗಬಹುದು, ಸಮಾಜಕ್ಕೆ ಆಗಬಹುದು, ಇದು ಶೋಭೆ ತರುವುದಿಲ್ಲವೆಂಬುದು ನಮಗೆಲ್ಲರಿಗೂ ಗೊತ್ತಿದೆ ದುರ್ದೈವವೆಂದರೆ, ಅಲ್ಲಿ VTU Vice Chancellor ಬಗ್ಗೆಯೂ ಗೊಂದಲ ಅವರು ನಿಯಮಾವಳಿ ಮೀರಿ ಮುಂದುವರೆಯುತ್ತಿರುವಂತಹ ವಾತಾವರಣ ವಿಜಾಪುರದಲ್ಲಿರುವ ಮಹಿಳಾ ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಬಗ್ಗೆಯೂ ಗೊಂದಲ ಅದೇನೇ ಇದ್ದರೂ,